# ವೀರಶೈವ ಧರ್ಮದ ತಾತ್ತ್ವಿಕತೆ

ಡಾ. ರಾಜಶೇಖರ ಜಮದಂಡಿ

ಕರ್ನಾಟಕವು ವೀರಶೈವ ಸಂಪ್ರದಾಯದ ನೆಲೆವೀಡು. ಶಿವಭಕ್ತಿಯು ಶಿವಾನುಭೂತಿಯೆಡೆಗೆ ಸಾಗುವ ಅದ್ಭುತ ಸಾಧನಾಮಾರ್ಗವಿದು. ಇದರ ತಾತ್ತ್ವಿಕ ಮಜಲುಗಳನ್ನು ಸರಳವಾಗಿ ನಿರೂಪಿಸಿರುವ ಲೇಖಕರು ಚಾಮರಾಜನಗರದ ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಾಪಕರು. ಇವರು ವೀರಶೈವ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ.



ಗಳಗನಾಥ ದೇವಸ್ಥಾನ – ಬಾದಾಮಿ

**ಯಾ**ವುದೇ ಧರ್ಮವಾಗಲಿ ಗಮನಿಸಬೇಕಾದ ಮುಖ್ಯವಾದ ಅಂಶಗಳೆರಡು: ಒಂದು ತಾತ್ತ್ವಿಕ ಸಿದ್ಧಾಂತ. ಇನ್ನೊಂದು, ಆಚರಣೆಯ ಮಾರ್ಗ. ತಾತ್ವಿಕ ಸಿದ್ಧಾಂತದಲ್ಲಿ ಬಹಿರಂಗ–ಅಂತರಂಗಗಳನ್ನು ಕುರಿತು ಬೌದ್ಧಿಕ ವಿವೇಚನೆಯುಳ್ಳ ಅಂಶವಿರುತ್ತದೆ. ಅಂದರೆ, ಈ ಸೃಷ್ಟಿಯ ರಹಸ್ಯವೇನು? ಕಾರಣಕರ್ತರಾರು? ಇದರ ಸ್ವರೂಪವೇನು? ಜೀವಿಗಳ ಹುಟ್ಟು–ಸಾವು ಹೇಗೆ? ಸೃಷ್ಟಿಕರ್ತನಿಗೂ ಜೀವಿಗಳಿಗೂ ಇರುವ ಸಂಬಂಧವೇನು? ಇತ್ಯಾದಿ ವಿಷಯಗಳ ಜಿಜ್ಞಾಸೆ ಇಲ್ಲಿ ಕಂಡುಬರುತ್ತದೆ. ಇಂತಹ ತಾತ್ವಿಕ ಜಿಜ್ಞಾಸೆಗಳ ಆದರ್ಶವನ್ನು ಆಚರಣೆಯಿಂದ ಮುಟ್ಟಿ, ಆನಂದದ ನಿಲುವನ್ನು ಅನುಭವಪೂರ್ವಕವಾಗಿ ಕಂಡುಕೊಂಡಾಗ, ಇದೊಂದು ಧರ್ಮದ ಆಚರಣೆಯ ಮಾರ್ಗವಾಗಿ ಪರಿಣಮಿಸುತ್ತದೆ. ವೀರಶೈವ ಧರ್ಮವು ಈ ರೀತಿಯಲ್ಲಿ ಪರಿಪುಷ್ಟವಾಗಿ ಬೆಳೆದುಬಂದಿದೆ.

ಶ್ರೇಷ್ಠವಾದ ಈ ಧರ್ಮದ ಹಿನ್ನೆಲೆಯನ್ನು ಅವಲೋಕಿಸಿದಾಗ ಇದು ಶಿವನಿಂದಲೇ ಪ್ರಾಪ್ತವಾಯಿತೆನ್ನುವಷ್ಟರಮಟ್ಟಿಗೆ ಸನಾತನವಾದುದು. ವೀರಶೈವ ಭಾಷ್ಯವೆನಿಸಿರುವ ಶ್ರೀಕರ ಭಾಷ್ಯವನ್ನೇ ಆಧಾರವಾಗಿ ತೆಗೆದುಕೊಂಡಿರುವ **ಸಿದ್ಧಾಂತ ಶಿಖಾಮಣಿ**ಯಲ್ಲಿ ಹೇಳಿರುವಂತೆ (ಇದು ೧೩ ನೇ ಶತಮಾನದಲ್ಲಿ ರಚಿತವಾಗಿರಬಹುದು) **ತತ್ ಸಂಪ್ರದಾಯಸಿದ್ಧೇನ ರೇಣುಕೇನ ಮಹಾತ್ಮನಾ** ಅಂದರೆ ವೀರಶೈವ ಸಂಪ್ರದಾಯದಲ್ಲಿ ಪರಿಣತರಾದ ರೇಣುಕಾಚಾರ್ಯರಿಂದ ಈ ಸಿದ್ಧಾಂತವು ಅಗಸ್ತ್ಯರಿಗೆ ಉಪದೇಶಿಸಲ್ಪಟ್ಟಿತು.

ಸಿದ್ಧಾಂತ ಶಿಖಾಮಣಿಯ ಭಾಷಾಂತರವಾದ **ಮಣಿ ಮುಕುರದಲ್ಲಿ, ಪರಶಿವಂ ಪಾರ್ವತಿಗೆ ಪುತ್ರ ಷಣ್ಮುಖಂಗೆ ಪೇಳಿದ ಷಟ್‌ಸ್ಥಲದ ಸಿದ್ಧಾಂತಮಂ** ಎಂದಿದೆ. ಅಲ್ಲದೆ ಈ ಸನಾತನವಾದ ವೀರಶೈವ ಧರ್ಮವು ಕ್ಷೀಣದೆಸೆಯಲ್ಲಿದ್ದಾಗ ಪರಶಿವನು ಪಂಚಾಚಾರ್ಯರಿಗೆ, **ಮದ್ಭಕ್ತಿಂ ಸ್ಥಾಪಯಿತ್ವಾ ಮಹೀತಲೇ ಮನ್ಮತಂ ಪ್ರಬಲೀಕೃತ್ವಾ** – "ನನ್ನ ಭಕ್ತಿಯನ್ನು ಭೂಮಿಯಲ್ಲಿ ಸ್ಥಾಪಿಸಿರಿ. ನನ್ನ ಮತವನ್ನು ಪ್ರಬಲಗೊಳಿಸಿರಿ" ಎಂದು ಹೇಳಿದ ಉಲ್ಲೇಖವು ಸ್ವಾಯಂಭುವ ಆಗಮಾದಿಗಳಲ್ಲಿ ಉಕ್ತವಾಗಿದೆ. **'ವಿ'** ಎಂಬುದು ಲಿಂಗಾಂಗ ಸಾಮರಸ್ಯರೂಪವಾದ ಶಿವಜೀವೈಕ್ಯ ವಿದ್ಯೆಯನ್ನು ಸೂಚಿಸುತ್ತದೆ. ಇಂತಹ ಶಿವಜೀವೈಕ್ಯ ವಿದ್ಯೆಯಲ್ಲಿ ವಿನೋದದಿಂದ ಕ್ರೀಡಿಸುವವರೇ **'ವೀರಶೈವ'**ರು.

ಲಿಂಗಧಾರಿ ಧರ್ಮವಾದ ಇದು ಶಿವನಿಂದಲೇ ಸ್ಥಾಪಿಸಲ್ಪಟ್ಟಿತೆಂದು ಹೇಳುವ ಆಧಾರದಲ್ಲಿ **ಧರ್ಮಃ ಪಾಶುಪತಃ ಶ್ರೇಷ್ಠ** ಎಂದು ಕರೆಯಲಾಗಿದೆ. ಅಂದರೆ ಶಿವನನ್ನುಳಿದ ಜೀವರುಗಳೆಲ್ಲಾ ಪಶುಗಳು. ಅವರಿಗೆ ಒಡೆಯನಾದ ಶಿವನು ಮಾತ್ರ ಪಶುಪತಿ. ಮಲತ್ರಯಗಳೆಂಬ ಪಾಶದಿಂದ ಜೀವರುಗಳಾದ ಪಶುಗಳು

ಬಂಧಿತರಾಗಿದ್ದಾರೆ. ಹಾಗಾಗಿ ಪಶುಪತಿಯಾದ ಶಿವನನ್ನು ಲಿಂಗರೂಪದಲ್ಲಿ ಪೂಜಿಸುವುದರಿಂದ ಶಿವನು ಪ್ರಸನ್ನನಾಗುವನು. ಶಿವಯೋಗದಿಂದ ಪಾಶವು ಹರಿದುಹೋಗಿ ಮೋಕ್ಷ ಸಿದ್ಧಿಸಬಹುದು. **ದಯವೇ ಧರ್ಮದ ಮೂಲ**ವಾದುದರಿಂದ ಯಜ್ಞಯಾಗಾದಿಗಳಲ್ಲಿ ಪ್ರಾಣಿಹಿಂಸೆಯನ್ನು ಮಾಡುವುದು ಈ ಧರ್ಮಕ್ಕೆ ವಿರೋಧವಾದುದು. ಇವು ವೀರಶೈವ ಧರ್ಮದ ಮುಖ್ಯ ಲಕ್ಷಣಗಳು.

### ವೀರಶೈವ ಧರ್ಮ

ವೀರಶೈವ ಧರ್ಮವನ್ನು **ದ್ವೈತಾದ್ವೈತ, ಶಿವಾದ್ವೈತ** ಮತ್ತು **ಶಕ್ತಿವಿಶಿಷ್ಟಾದ್ವೈತ** ಎಂಬುದಾಗಿ ಕರೆದಿರುವುದುಂಟು. ಆದರೆ ಜೀವ–ಜಗತ್ತು–ಈಶ್ವರ ಇವುಗಳ ಸಂಬಂಧಗಳನ್ನು ಅವಲೋಕಿಸಿದಾಗ **ಶಕ್ತಿವಿಶಿಷ್ಟ** ಎಂಬುದೇ ಇದಕ್ಕೆ ಬಹಳ ಸೂಕ್ತವೆನ್ನಬಹುದು. ಅಂದರೆ ಜಗತ್ತಿನ ಪ್ರತಿ ಅಣುವಿನಲ್ಲಿಯೂ ತನ್ನದೇ ಆದ ಶಕ್ತಿಯ ತತ್ತ್ವ ಅಡಗಿದೆಯೆಂಬುದನ್ನು ಇದು ಗಮನಿಸುವುದು. ಶಕ್ತಿಯೆಂಬುದು ಒಂದಲ್ಲ ಒಂದು ರೂಪದಲ್ಲಿ ಎಲ್ಲ ಸಿದ್ಧಾಂತಗಳಲ್ಲಿಯೂ ಕಂಡುಬರುವ ಅಂಶ. ರಘುವಂಶದ ಈ ಮಂಗಳಶ್ಲೋಕವು ಶಿವಶಕ್ತಿಯರ ಅವಿನಾಭಾವ ಸಂಬಂಧವನ್ನು ಬಹಳ ಅರ್ಥವತ್ತಾಗಿ ಸೂಚಿಸುತ್ತದೆ.

**ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।**
**ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥**

"ಮಾತು ಮತ್ತು ಅರ್ಥಗಳಂತೆ ಸದಾ ಕೂಡಿಕೊಂಡಿರುವ, ಜಗತ್ತಿನ ತಂದೆತಾಯಿಗಳಾದ ಪಾರ್ವತೀ ಪರಮೇಶ್ವರರನ್ನು ಮಾತು ಮತ್ತು ಅದರ ಅರ್ಥಗಳ ಅರಿವಿಗಾಗಿ ವಂದಿಸುತ್ತೇನೆ."


ಅಲ್ಲಮಪ್ರಭು ದೇವರು

ವೀರಶೈವ ಧರ್ಮದ ವಿವೇಚನೆ ಪೂರ್ಣಗೊಳ್ಳಬೇಕಾದರೆ, ಅದು ಮುಖ್ಯವಾಗಿ ಮೂರು ಅಂಶಗಳನ್ನೊಳಗೊಂಡಿರಬೇಕು. ಅವೆಂದರೆ, **ತಾತ್ವಿಕ ಚಿಂತನೆ, ಧಾರ್ಮಿಕ ಆಚರಣೆ** ಮತ್ತು **ನೈತಿಕ ನಿಯಮಗಳು.** ಈ ಮೂರು ಕಣ್ಣುಗಳಿಂದೊಡಗೂಡಿದವನೇ ಮುಕ್ಕಣ್ಣ. ವೀರಶೈವ ಧರ್ಮದನ್ವಯ ಪರಮಾತ್ಮನು ಸಾಕಾರನಿದ್ದಂತೆ, ನಿರಾಕಾರನೂ ಆಗಿದ್ದಾನೆ. ಸಾಕಾರದಲ್ಲಿ ಭಕ್ತಿಗೆ ಪ್ರಾಧಾನ್ಯವಾದರೆ ನಿರಾಕಾರದಲ್ಲಿ ಜ್ಞಾನಕ್ಕೆ ಮಹತ್ವವಿರುತ್ತದೆ. ಈ ಜ್ಞಾನ ಮತ್ತು ಭಕ್ತಿಗಳ ಸಾಮರಸ್ಯವೇ ಷಟ್‌ಸ್ಥಲವಾಗಿದೆ.

ವೀರಶೈವ ಧರ್ಮಕ್ಕೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ತಾತ್ವಿಕ ಹಿನ್ನೆಲೆಯನ್ನು ನಿರ್ಮಿಸಲಾಗಿದೆ. ಈ ತಾತ್ವಿಕ ದರ್ಶನವನ್ನು ಧಾರ್ಮಿಕತೆಯ ಮಾರ್ಗವಾಗಿ ಅನುಭವಕ್ಕೆ ತಂದುಕೊಳ್ಳುವ ಪ್ರಕ್ರಿಯೆಯೇ **ಷಟ್ಸ್ಥಲ.** ೧೨ ನೇ ಶತಮಾನದ ಶರಣರು ಭಕ್ತಿ ಜ್ಞಾನ ಕರ್ಮಗಳ ಮಾರ್ಗವಾಗಿ ನಡೆದು ತಮ್ಮ ಗುರಿಯನ್ನು ಸಾಧಿಸಿದರು. ಇವರಿಗಿಂತ ಹಿಂದೆಯೇ ಷಟ್‌ಸ್ಥಲದ ಉಲ್ಲೇಖಗಳಿದ್ದರೂ ಅದಕ್ಕೊಂದು ವ್ಯಾಪಕತೆಯನ್ನು ತಂದುಕೊಟ್ಟವರು ಶಿವಶರಣರು. ಶೈವಧರ್ಮದ ಬೆಳವಣಿಗೆಯಲ್ಲಿ ಬಹುಶಃ ಪರಿಪೂರ್ಣತೆಯನ್ನು ಸಾಧಿಸಿದ ಶಾಖೆಯೇ 'ವೀರಶೈವ' ಎನ್ನಬಹುದು. ಶೈವಧರ್ಮದ ತತ್ತ್ವಸಿದ್ಧಾಂತವನ್ನೂ, ಆಚರಣೆಯ ಮಾರ್ಗವನ್ನೂ ವೀರಶೈವ ಧರ್ಮವು ಪರಿಣಾಮಕಾರಿಯಾಗಿ ರೂಢಿಸಿಕೊಂಡಿತು. ೧೨ ನೇ ಶತಮಾನದಲ್ಲಿ ಅಂದರೆ ವಚನಕಾರರ (ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ, ಅಕ್ಕಮಹಾದೇವಿ) ವ್ಯಕ್ತಿತ್ವದಿಂದ ಹೊಸಕಾಂತಿ, ಹೊಸಸ್ವರೂಪ ಪಡೆದು ನಾಡಿನ ನಾನಾ ಭಾಗಗಳಿಂದ ಸಾಧಕರು 'ಕಲ್ಯಾಣ'ಕ್ಕೆ ಆಗಮಿಸಿದರು. ಅಲ್ಲಿನ ಅನುಭವಮಂಟಪದಲ್ಲಿ ಚರ್ಚೆಗೊಂಡ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಮುಂತಾದ ಆಚಾರ ಮಾರ್ಗಗಳು ಇನ್ನೂ ಎತ್ತರಕ್ಕೆ ಬೆಳೆದವು. ವೀರಶೈವ ಧರ್ಮವನ್ನೊಳಗೊಂಡ 'ವಚನಧರ್ಮಶಾಸ್ತ್ರ' ವು ಅಭೂತಪೂರ್ವಕವಾಗಿ ಹೊರಹೊಮ್ಮಿದೆ. ಇದರ ತಾತ್ತ್ವಿಕ ಚಿಂತನೆಗಳು ಸಕಲರ ಮನಃಶುದ್ಧಿಯ ಪರಮಗುರಿಯನ್ನೇ ಹೊಂದಿವೆ. ಈ ಹಿನ್ನೆಲೆಯನ್ನು ಒಳಗೊಂಡ ವೀರಶೈವ ಧರ್ಮದಲ್ಲಿ ಅಷ್ಟಾವರಣವು **ಅಂಗ**ವಾದರೆ, ಪಂಚಾಚಾರವು **ಪ್ರಾಣ** ಹಾಗೂ ಷಟ್‌ಸ್ಥಲವು **ಆತ್ಮ**ವೆನಿಸಿದೆ.

### ಷಟ್‌ಸ್ಥಲಗಳು

ವೀರಶೈವ ಧರ್ಮದ ವಿಶಿಷ್ಟ ಕೊಡುಗೆಯಾದ ಷಟ್‌ಸ್ಥಲಗಳ ತಾತ್ತ್ವಿಕ ಸಿದ್ಧಾಂತದಲ್ಲಿ ಭೇದಾಭೇದಗಳ ಸಮನ್ವಯವನ್ನು ಕಾಣಬಹುದು. ಇಲ್ಲಿ 'ಸ್ಥಲ'ವೆಂದರೆ ಸಚ್ಚಿದಾನಂದ ನಿತ್ಯ ಪರಿಪೂರ್ಣವಾದ, ಏಕಮೇವಾದ್ವಿತೀಯವಾದ, ಮಹದಾದಿ ತತ್ವಗಳಿಗೆ ಅತೀತವಾದ ಪರಶಿವ ತತ್ವ. ಇದರಲ್ಲಿ ಲಿಂಗಸ್ಥಲ–ಅಂಗಸ್ಥಲಗಳೆಂಬ ಎರಡು ವಿಭಾಗಗಳಿವೆ. ಈ ಲಿಂಗಸ್ಥಲವು **'ಇಷ್ಟ' 'ಪ್ರಾಣ' 'ಭಾವ'** ಗಳೆಂದು ವಿಭಾಗಗೊಂಡರೆ, ಅಂಗಸ್ಥಲವನ್ನು **ತ್ಯಾಗಾಂಗ, ಭೋಗಾಂಗ, ಯೋಗಾಂಗ** ಎಂದು ವಿಭಾಗಿಸಲಾಗಿದೆ. ಲಿಂಗಷಟ್‌ಸ್ಥಲದಲ್ಲಿ **ಆಚಾರಲಿಂಗ,**

ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಿಲಿಂಗ, ಮಹಾಲಿಂಗ ಎಂಬುವು ಭೇದಗಳು. ಅಂಗಷಟ್‌ಸ್ಥಲದಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಭೇದಗಳು. ಅದೇ ರೀತಿ ಲಿಂಗಷಟ್‌ಸ್ಥಲಗಳಲ್ಲಿ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಗಳ ಆವಿರ್ಭಾವವಿದೆ. ಮೋಕ್ಷಾಪೇಕ್ಷೆಯುಳ್ಳ ಶುದ್ಧಜೀವನು ಗುರು ಕಾರುಣ್ಯದಿಂದ ಲಿಂಗಾರಾಧನೆಯಲ್ಲಿ ತೊಡಗಿದಾಗ ಅವನ ಅಂಗಷಟ್ಸ್ಥಲಗಳಲ್ಲಿರುವ ಷಟ್ಭಕ್ತಿಗಳು ಅಂದರೆ, ಶ್ರದ್ಧಾಭಕ್ತಿ, ನೈಷ್ಠಿಕ ಭಕ್ತಿ, ಅವಧಾನಭಕ್ತಿ, ಅನುಭಾವ ಭಕ್ತಿ, ಆನಂದಭಕ್ತಿ, ಸಮರಸಭಕ್ತಿಗಳು ಕ್ರಮೇಣ ಜಾಗೃತವಾಗುತ್ತ, ಊರ್ಧ್ವ ಗಮನ ಪ್ರವೃತ್ತಿಯುಳ್ಳವಾಗಿ ಲಿಂಗಾಂಗ ಸಾಮರಸ್ಯವನ್ನು ಸಾಧಿಸುತ್ತವೆ. ಅವು ಮಾನವನ ದೈವತ್ವ ಸಾಧನೆಯ ಆರೋಹಣ ಮಾರ್ಗದಲ್ಲಿರುವ ಆರು ಮೆಟ್ಟಿಲುಗಳು.

ಭಕ್ತಿಯ ವಿಕಾಸದೊಂದಿಗೆ ಹಂತಹಂತವಾಗಿ ಮೇಲೇರಿ ಲಿಂಗದಲ್ಲಿ ಲೀನವಾಗುವ ಸತ್‌ಕ್ರಿಯೆ, ಸಾಧಕನ ಆತ್ಮಯಾತ್ರೆ ಮತ್ತು ಪೂರ್ಣದೃಷ್ಟಿಯ ಪರಿಕಲ್ಪನೆಗಳು ಇಲ್ಲಡಗಿವೆ. ಪ್ರಕೃತಿಯಲ್ಲಿರುವ ಚರಾಚರ ವಸ್ತುಗಳೆಲ್ಲ ಶಿವನಿಂದಲೇ ಹೊರಹೊಮ್ಮಿ ಅನಂತರ ಅವನೊಳಗೆ ಲೀನವಾಗುವ ಈ ಕ್ರಿಯೆಯ ಬಗ್ಗೆ ಶರಣರಲ್ಲಿ ದೃಢವಿಶ್ವಾಸವಿತ್ತು. ಇದನ್ನು ಸಂಕೇತಿಸುವ **'ಸ್ಥಲ'** ಮತ್ತು **'ಲಿಂಗ'** ಪದಗಳನ್ನು ಶರಣರು ಶಕ್ತಿವಿಶಿಷ್ಟನಾದ ಪರಶಿವನಿಗೆ ಬಳಸಿರುವುದು ಕಂಡುಬರುತ್ತದೆ. 'ಸ್ಥಲ' ಶಬ್ದದಲ್ಲಿಯ 'ಸ್ಥ' ಎಂಬುದು ಆಧಾರವನ್ನು ಸೂಚಿಸಿದರೆ, ಲಿಂಗ ಶಬ್ದದಲ್ಲಿಯ 'ಗ' ಕಾರವು ಗಮನ ಸೂಚಕವಾಗಿದೆ. ಆರಂಭದ ಹಂತವು ಶಿವನ ಸ್ಥಲವಾದರೆ, ತದನಂತರದ ಕೊನೆಯ ಹಂತವು 'ಲಿಂಗ' ವಾಗುತ್ತದೆ.

**ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನೈಷ್ಠೆ, ಪ್ರಸಾದಿಗೆ ಅವಧಾನ,**
**ಪ್ರಾಣಲಿಂಗಂಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ, ಐಕ್ಯಂಗೆ**
**ಕುರುಹುಗೊಂಬುವುದಕ್ಕೆ ಮುನ್ನವೇ ನಿರಾಳ, ಇಂತೀ**
**ಷಟ್‌ಸ್ಥಲ ಭೇದ ಎನ್ನಯ್ಯ ಪ್ರಿಯ**
**ನಿಷ್ಕಳಂಕ ಮಲ್ಲಿಕಾರ್ಜುನಾ**

ಅಕ್ಕಮಹಾದೇವಿಯ ಈ ವಚನ ಷಟ್‌ಸ್ಥಲ ಮಾರ್ಗದ ಒಟ್ಟು ವ್ಯಾಪ್ತಿಯನ್ನು ವಿಶದೀಕರಿಸಿದೆ. ಈಗ ಒಂದೊಂದೇ ಸ್ಥಲವನ್ನು ನೋಡೋಣ.

### ಭಕ್ತಸ್ಥಲ

ಇದರಲ್ಲಿ ವಿಶ್ವಾಸ ಮತ್ತು ಶ್ರದ್ಧೆ ಮುಖ್ಯವಾದುದು. ಇದರಲ್ಲಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧಸಂಪತ್ತಿಸ್ಥಲ, ಚತುರ್ವಿಧ ಸಾರಾಯಸ್ಥಲ, ಉಪಾಧಿಮಾಟಸ್ಥಲ, ನಿರುಪಾಧಿ ಮಾಟಸ್ಥಲ ಹಾಗೂ ಸಹಜಮಾಟಸ್ಥಲ ಹೀಗೆ ೧೫ ವಿಭಾಗ ಗಳಿವೆ. ಈ ಸ್ಥಲದ ಮೊದಲ ಗುಣವೇ ಅಚಲ ವಿಶ್ವಾಸ ಅಥವಾ ಶ್ರದ್ಧೆ. ಆದರೆ ಅದು ಅವಿವೇಚಿತವಾದ ಅಂಧಶ್ರದ್ಧೆಯಲ್ಲ, ದೊಡ್ಡವರ ವಿಚಾರದಲ್ಲಿ ವಿಚಾರಪೂರ್ವಕವಾದ ಹಾಗೂ ಶುದ್ಧಾಂತಃಕರಣದಿಂದ ಮೂಡಿದ ಶ್ರದ್ಧೆ. **"ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು", "ನೆಲದ ಮರೆಯ ನಿಧಾನ ದಂತೆ", "ಮರೀಚಿಯೊಳಡಗಿದ ಬಿಸಿಲಂತಿದ್ದಿತ್ತು"** ಎಂಬ ವಚನಗಳನ್ನು ಈ ಸ್ಥಲಕ್ಕೆ ಪೂರಕವಾಗಿ ನೋಡಬಹುದು. ಈ ಸ್ಥಲದಲ್ಲಿ ಗುರುಸೇವೆ, ಕಿಂಕರತ್ವ, ಗುರು–ಜಂಗಮರಲ್ಲಿ ಏಕತ್ವ, ಕಾಯಕನಿಷ್ಠೆ, ದಾಸೋಹಂಭಾವಗುಣಗಳು ಇರುತ್ತವೆ. **"ಗುರುವಚನವಿಲ್ಲದೆ ಲಿಂಗವೆಂದೆನಿಸದು"** ಎಂದು ಗುರುವಿನ ಮಹತ್ವವನ್ನು ತಿಳಿಸಿದ ಬಸವಣ್ಣನವರು, **"ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು"** ಎಂದಿದ್ದಾರೆ.

**ಕಾಯವಿದ್ದು ಕಾಂಬುವದು ಗುರುಸ್ಥಲ**
**ಜೀವವಿದ್ದು ಕಾಂಬುವದು ಲಿಂಗಸ್ಥಲ**
**ಭಾವವಿದ್ದು ಕಾಂಬುವದು ಜಂಗಮಸ್ಥಲ**
**ತ್ರಿವಿಧವನೊಡಗೂಡಿ ಕಾಂಬುವದು ಭಕ್ತಿಸ್ಥಲ**
**ಭಕ್ತಿ ನಿಶ್ಚಯವಾಗಿ ನಿಂದಲ್ಲಿ**
**ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ನಿಶ್ಚಯವಾದ ಸ್ಥಲ**

ಎಂದು ಶಿವಲೆಂಕ ಮಂಚಣ್ಣ, ಭಕ್ತಿಸ್ಥಲದಲ್ಲಿ **ಗುರು ಲಿಂಗ ಜಂಗಮ** ಈ ತ್ರಿವಿಧಗಳೂ ಒಡಗೂಡಿವೆಯೆಂಬುದನ್ನು ಸೂಚಿಸಿದ್ದಾನೆ. ಭಕ್ತಿಯೆಂಬುದು ಸುಲಭವಲ್ಲ; **"ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು"** ಎಂದು ಹೇಳಿದ್ದಾರೆ ಬಸವಣ್ಣನವರು.


ಅಕ್ಕಮಹಾದೇವಿ

## ಮಾಹೇಶ್ವರ ಸ್ಥಲ

ಸದ್ಭಕ್ತಿಗೆ ಎಲ್ಲಿ ಯೌವ್ವನ ಪ್ರಾಪ್ತವಾಗಿದೆಯೋ ಅಲ್ಲಿ ನಿಷ್ಠಾಭಕ್ತಿ ಕಂಡುಬರುತ್ತದೆ. ಇದೇ **ಮಾಹೇಶ್ವರ ಸ್ಥಲ.** ವಿಚಾರ–ಆಚಾರಗಳಿಂದೊಡಗೂಡಿದ ಅಚಲವಾದ ನಿಷ್ಠೆ ಇಲ್ಲಿ ಬೆಳೆಯುತ್ತದೆ. ಅನ್ಯಸ್ತ್ರೀಸಂಗ, ಅನ್ಯರ ನಿಂದನೆ, ಹಿಂಸೆ, ಅನ್ಯರ ದ್ರವ್ಯಾಪೇಕ್ಷೆ ಮತ್ತು ತನಗಿಂತ ಭಿನ್ನವಾಗಿ ದೇವನಿದ್ದಾನೆಂಬ ಭಾವ ಈ ಐದು ದುರಿತಗಳಿರುತ್ತವೆ. ಇವುಗಳನ್ನು ಮಾಹೇಶ್ವರ ಸ್ಥಲದಲ್ಲಿದ್ದವನು ಪರಿಹರಿಸಿಕೊಂಡು, ಪರಿಶುದ್ಧನಾಗಬೇಕು. ಅದಕ್ಕಾಗಿ ಶಿವಶರಣರ ಸಂಗ ಅತಿ ಮಹತ್ವದ್ದು. **"ಭಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ, ಭಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ"**– ಇಂತಹ ನಿಷ್ಠೆಯುಳ್ಳ ಭಕ್ತನು ನಟ್ಟಡವಿಯಲ್ಲಿದ್ದರೂ ಅದು ಪಟ್ಟಣವೆನಿಸುತ್ತದೆ ಎಂಬ ಮಾತಿದೆ.

**ಕಿಡಿಕಿಡಿ ಕೆದರಿದಡೆ ಎನಗೆ ಹಸಿವು ತೃಷೆ ಅಡಗಿತ್ತೆಂಬೆನು**
**ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು**
**ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು**
**ಚನ್ನಮಲ್ಲಿಕಾರ್ಜುನಯ್ಯ, ಶಿರ ಹರಿದು ಬಿದ್ದಡೆ**
**ಪ್ರಾಣ ನಿಮಗರ್ಪಿತವೆಂಬೆನು**

ಎಂಬಂತಹ ನಿಷ್ಠೆ ಸಾಧಕನಲ್ಲಿರಬೇಕೆಂದು ಅಕ್ಕ ಮಹಾದೇವಿಯು ಸೂಚಿಸಿದ್ದಾಳೆ. ಹಾಗಾಗಿ **"ಕಾಯದ ಕಳವಳಕ್ಕಂಜಿ ಕಾಯಯ್ಯ"** ಎನ್ನದೆ, **"ಜೀವನೋಪಾಯಕ್ಕಂಜಿ ಈಯಯ್ಯ"** ಎಂದು ಬೇಡದೆ, **"ಅಂಗಕ್ಕೆ ಬಡತನವಲ್ಲದೇ ಮನಕ್ಕೆ ಬಡತನವುಂಟೆ?"** ಎಂದು ಪ್ರಶ್ನಿಸಿಕೊಳ್ಳುವುದರ ಮೂಲಕ, **"ಮರಣವೇ ಮಹಾನವಮಿ"** ಎಂದು ಎದುರುಗೊಳ್ಳುವ ಶ್ರೀಮಂತಿಕೆ ಶರಣರದು. ಅಸತ್ಯ, ಅನೀತಿ, ಪರಧನ, ಪರಸ್ತ್ರೀ, ಪರಹಿಂಸೆ, ಪರಲೋಕ, ಪರದೈವಗಳ ಕಡೆಗೆ ಮನಸ್ಸು ಹೋಗಬಾರದು. **"ಹೊನ್ನಿನೊಳಗೊಂದೊರೆಯ, ಸೀರೆಯೊಂದೆಳೆಯ, ಇಂದಿಗೆ ನಾಳಿಂಗೆ"** ಎಂದು ಸಂಗ್ರಹ ಮಾಡದೆ, **"ಸದಾ ಸಂತುಷ್ಟಹೃದಯಃ ಸರ್ವಪ್ರಾಣಿಹಿತೇರತಃ"** – ಯಾವಾಗಲೂ ಸಂತುಷ್ಟನಾಗಿ ಇದ್ದುಕೊಂಡು ಎಲ್ಲ ಪ್ರಾಣಿಗಳ ಹಿತದಲ್ಲಿ ನಿರತನಾಗಿದ್ದು, ನಯ, ವಿನಯ, ಭಯ, ಭೃತ್ಯಾಚಾರಗಳು ಅಂಗವಾಗಿ ಇರಬಲ್ಲುದೇ ಮಾಹೇಶ್ವರ ಸ್ಥಲವಾಗಿದೆ.

## ಪ್ರಸಾದಿಸ್ಥಲ

ಮಾಹೇಶ್ವರ ಸ್ಥಲದಲ್ಲಿ ಸಮಗ್ರನಿಷ್ಠೆಯಿಂದ ಬೆಳೆದ ಸಾಧಕ ಮುಂದೆ ಈ ಜಗತ್ತನ್ನು ಕಾಣುವ ದೃಷ್ಟಿಯೇ ಬದಲಾಗುತ್ತದೆ. ಸೃಷ್ಟಿಶಕ್ತಿಯ ಅಗಾಧ ವೈಭವವನ್ನು ಕಾಣುವ ಆತನಿಗೆ ಜಗತ್ತೇ ಪ್ರಸಾದಮಯವಾಗಿ ಕಾಣುತ್ತದೆ. **"ಈಶಾವಾಸ್ಯಮಿದಂ ಸರ್ವಂ"** – 'ಎಲ್ಲವನ್ನೂ ಭಗವಂತನಿಂದ ಮುಚ್ಚಿಬಿಡಬೇಕು' ಎಂದು ಹೇಳಿದ ಉಪನಿಷತ್ತಿನ ನಿಲುವು ಆತನ ಸಹಜಸ್ಥಿತಿಯಾಗುತ್ತದೆ.

'ಪ್ರಸಾದ' ವೆಂಬ ಮಾತು ತುಂಬಾ ವ್ಯಾಪಕ ಅರ್ಥವನ್ನೊಳಗೊಂಡಿದೆ. ಪ್ರಸಾದಿಸ್ಥಲದಲ್ಲಿ ಮುಖ್ಯವಾದ ಅಂಶ ಎಂದರೆ, ಸತತ ಕ್ರಿಯೆಯಲ್ಲಿ ನಿರತನಾಗಿದ್ದರೂ ಅವುಗಳಿಗೆ ಅತೀತವಾಗಿರುವ ನಿರ್ಲಿಪ್ತತೆಯನ್ನು ರೂಢಿಸಿಕೊಳ್ಳುವುದು. ಕರ್ಮನಿರತನಾಗದೇ ಈ ಲೋಕದಲ್ಲಿ ಬದುಕುವ ಹಕ್ಕಿಲ್ಲ. **"ಕೃಷಿಯ ಮಾಡದೆ ಹಸಿವು ಹರಿವ ಪರಿ ಇನ್ನೆಂತೋ", "ಅಂತರಂಗದಲ್ಲಿ ಅರಿವಾದಡೇನೋ ಬಹಿರಂಗದಲ್ಲಿ ಕ್ರಿಯೆ ಇಲ್ಲದನ್ನಕ್ಕ?"** – ಈ ಬಗೆಯ ನೂರಾರು ವಚನಗಳಲ್ಲಿ ಕರ್ಮದ ಅವಶ್ಯಕತೆಯನ್ನು ಶಿವಶರಣರು ಸ್ಪಷ್ಟಪಡಿಸಿದ್ದಾರೆ. ಮಾಡಿದೆನೆಂಬುದು ಮನದಲ್ಲಿ ತಂದುಕೊಳ್ಳದೆ ಸಾಧಕನು ಕರ್ಮದಲ್ಲಿ ನಿರತನಾಗಬೇಕು. ಮುಂದೊಂದು ಕಲ್ಪಿಸದೆ, ಹಿಂದೊಂದು ಭಾವಿಸದೆ, ಸಲೆ ಸಂದ ರೀತಿಯಲ್ಲಿ ನಿರಪೇಕ್ಷಿತವಾಗಿ ಕರ್ಮನಿರತನಾಗಿರಬೇಕೆನ್ನುತ್ತಾರೆ ಶರಣರು.

**ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯ**
**ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯ**
**ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯ**
**ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ**
**ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ**
**ಇದುಕಾರಣ ಕೂಡಲಸಂಗಮದೇವರ ಪೂಜಿಸಿ**
**ಪ್ರಸಾದವ ಪಡೆವರೊಬ್ಬರೂ ಇಲ್ಲಾ!**

ಎಲ್ಲವೂ ಆತನದೆಂಬ ಭಾವದಿಂದ ಅರ್ಪಿತವಾದದ್ದು ಪ್ರಸಾದವಾಗುತ್ತದೆ. ನನ್ನದು ಎಂಬ ಭಾವನೆ ಅಲ್ಲಿ ಬರಬಾರದು. ಇಂತಹ ಪ್ರಸಾದದಿಂದ ದೇಹ ಪ್ರಸನ್ನವಾಗುತ್ತದೆ.

**ಒಕ್ಕುದು ಪ್ರಸಾದವೆಂಬರು, ಮಿಕ್ಕುದು ಪ್ರಸಾದವೆಂಬರು**
**ಒಕ್ಕುದು ಮಿಕ್ಕುದನೆಲ್ಲ ಬೆಕ್ಕು ಕೊಳ್ಳದೆ?**
**ಒಕ್ಕುಮಿಕ್ಕು ಹೋಗುವ ಸಂಚ ಸಕೀಲವ ಬಲ್ಲರೆ**
**ಗುಹೇಶ್ವರ ಲಿಂಗದಲ್ಲಿ ಆತನೇ ಪರಮ ಪ್ರಸಾದಿ**

ಎಂದು ಅಲ್ಲಮಪ್ರಭು ಪರಮ ಪ್ರಸಾದಿಯ ಲಕ್ಷಣವನ್ನು ಹೇಳಿದ್ದಾನೆ. ವೀರಶೈವನು ಅರ್ಚನ–ಅರ್ಪಣ–ಅನುಭವಗಳನ್ನು ತಪ್ಪದೇ ನಡೆಸಬೇಕು. ದೇವರಿಗೆ ನೈವೇದ್ಯ ಮಾಡಿ ಉಳಿದುದನ್ನು ಪ್ರಸಾದವೆಂದು ಭಾವಿಸುವುದು ಒಂದು ಹಂತದಲ್ಲಿ ಮಾತ್ರ. ನಿಜವಾದ ಪ್ರಸಾದವೆಂದರೆ ತಕ್ಕೈಸಿ ಶಿವನನ್ನೇ ಅಪ್ಪಿಕೊಳ್ಳುವುದು.

## ಪ್ರಾಣಲಿಂಗಿ ಸ್ಥಲ

ಪ್ರಾಣದಲ್ಲಿ ಲಿಂಗವನ್ನು ನಿಲ್ಲಿಸುವುದೇ ಪ್ರಾಣಲಿಂಗ; ಇಲ್ಲಿ ಭಕ್ತನ ಸಾಧನೆ, ಧ್ಯಾನದ ಕಡೆಗೆ ಮತ್ತು ಅನುಸಂಧಾನದ ಕಡೆಗೆ ತಿರುಗುತ್ತದೆಂಬುದೇ ಮುಖ್ಯ. ಪ್ರಸಾದಿಸ್ಥಲದ ಇಷ್ಟಲಿಂಗ ಉಪಾಸನೆಯು ಪ್ರಾಣಲಿಂಗಿ ಸ್ಥಲದಲ್ಲಿ ಅಂತಃಶಕ್ತಿಗಳನ್ನು ಜಾಗೃತಗೊಳಿಸುವ ಯೋಗದೆಡೆಗೆ ತಿರುಗುತ್ತದೆ. ಈ ಸ್ಥಲವು ಸಾಧಕನ ಯೋಗಾಭ್ಯಾಸದ ಕೊನೆಯ ಹಂತವನ್ನು ಒಳಗೊಂಡಿದೆ. ಸಾಧಕನು ತನ್ನ ಆಂತರಿಕ ವಿಕಾಸಮಾರ್ಗದಲ್ಲಿ ಸಾರ್ಥಕತೆಯನ್ನು ಕಾಣುವ ಹಂತ ಇದು.

**"ಲಿಂಗದಲ್ಲಿ ಪ್ರಾಣವ ನಿಲ್ಲಿಸಿ ಪ್ರಾಣದಲ್ಲಿ ಲಿಂಗವ ನಿಲ್ಲಿಸಿ ನೆನೆಯುತ್ತಿದ್ದ ಕಾರಣ ಪ್ರಾಣಲಿಂಗವಾಯಿತ್ತು"** ಎನ್ನುವ ಮಾತೇ ಇಲ್ಲಿ ಮುಖ್ಯವಾಗುತ್ತದೆ.

**ಎನ್ನ ಮನದ ಕೊನೆಯ ಮೇಲೆ**
**ಅಂಗವಿಲ್ಲದ ರೂಪವ ಕಂಡು ನಾನು ಬೆರಗಾದೆ;**
**ಅಂತರಂಗದ ಆತ್ಮನೊಳಗೆ ಅನಿಮಿಷ ನಿಜೈಕ್ಯ**
**ಗುಹೇಶ್ವರನಲ್ಲಯ್ಯನ ಕಂಡು ಬೆರಗಾದೆನು.**

ಎಂದು ಹೇಳುವಲ್ಲಿ ಅಲ್ಲಮಪ್ರಭುಗಳು ಪ್ರಾಣಲಿಂಗದ ಸ್ವರೂಪವನ್ನೇ ಸ್ಪಷ್ಟಪಡಿಸಿದ್ದಾರೆ. ಇಷ್ಟಲಿಂಗೋಪಾಸನೆಯು ಒಳಹೊರಗನ್ನು ವ್ಯಾಪಿಸಿ, ಸರ್ವಾಂಗಲಿಂಗಮಯವಾಗಿ ಪರಿಣಮಿಸುತ್ತದೆ. ಪ್ರಾಣಲಿಂಗ ಪೂಜೆಯ ವಿರಾಟ್ ವೈಭವವನ್ನು ಅಲ್ಲಮಪ್ರಭು ಹೀಗೆ ಹೇಳಿದ್ದಾರೆ:

**ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ**
**ಆಕಾಶಗಂಗೆಯಲ್ಲಿ ಮಜ್ಜನ;**
**ಹೂವಿಲ್ಲದ ಪರಿಮಳದ ಪೂಜೆ**
**ಹೃದಯಕಮಲದಲ್ಲಿ 'ಶಿವಶಿವಾ' ಎಂಬ ಶಬ್ದ**
**ಇದು ಅದ್ವೈತ ಕಾಣಾ ಗುಹೇಶ್ವರ.**

ಪ್ರಾಣಲಿಂಗಿಯಲ್ಲಿ ಅನುಭಾವ ಪ್ರಧಾನವಾಗಿ ಪರಿಣಮಿಸುತ್ತದೆ. ಶರಣರ ಮಾರ್ಗ ಮುಖ್ಯವಾಗಿ ಅನುಭಾವ ಮಾರ್ಗ. ಈ ಅನುಭಾವವನ್ನೇ ಅವಲಂಬಿಸಿ, ಪ್ರಾಣಲಿಂಗಿಯ ಯೋಗ ಮಾರ್ಗ ರೂಪುಗೊಳ್ಳುತ್ತದೆ.

### ಶರಣಸ್ಥಲ

ಇಲ್ಲಿ ಭಾವಲಿಂಗ ಭರಿತನಾಗಿ ಸಾಧಕನು ಆನಂದ ಮತ್ತು ಸಮರಸ ಭಕ್ತಿಗಳಿಂದ ಆತ್ಯಂತಿಕ ತೃಪ್ತಿಯನ್ನು ಪಡೆದುಕೊಳ್ಳುತ್ತಾನೆ. **'ಶರಣ' ಎಂದರೆ ಶಿವನಿಗೆ ಮೊರೆಹೊಕ್ಕವನು, ತಲೆಬಾಗಿದವನು, ಕಿಂಕರತೆಯನ್ನು ಹೊಂದಿದವನು.** ಅಲ್ಲದೆ ಶಿವಯೋಗ ಸಾಧಕ ಕೂಡ ಎಂದರ್ಥ. ಮೊದಲ ನಾಲ್ಕು ಹಂತಗಳನ್ನು ದಾಟಿ ಶಿವಯೋಗದ ತುತ್ತತುದಿಯಲ್ಲಿರುವವನೇ **ಅನುಭಾವಿ** ಎಂದು ಅರ್ಥೈಸಬಹುದು.

**ಲಿಂಗವೇ ಪತಿಯಾಗಿ ಅನ್ಯವನರಿಯದೆ,**
**ಪಂಚೇಂದ್ರಿಯವಿರಹಿತವಾಗಿ,**
**ತೆರಹಿಲ್ಲದ ಅರುಹು ತಾನಾಗಿ,**
**ನೆರೆ ಅರುಹಿನೊಲು ನಿಬ್ಬೆರಗಾಗಿ,**
**ಹೃದಯಕಮಲಮಧ್ಯದಲ್ಲಿ ಪರಮೇಶ್ವರನೊಳಗಣ**
**ಪರಸ್ನೇಹವೆರಸಿ ಅಗಲದಿಪ್ಪುದೀಗ ಶರಣಸ್ಥಲ**

ಎನ್ನುತ್ತಾರೆ ವಚನಕಾರರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಧಕ ತನ್ನ ಉದ್ಧಾರವನ್ನಷ್ಟೇ ಗುರಿಯಾಗಿಟ್ಟುಕೊಳ್ಳದೆ, ತಾನು ಕಂಡ ಬೆಳಕನ್ನು ಇತರರಿಗೂ ತೋರಿಸುವ ಸಾರ್ಥಕತೆ ಬಹಳ ಮುಖ್ಯ ಎನ್ನುವುದು. ಇದನ್ನೇ ಆಧ್ಯಾತ್ಮಿಕ ಎತ್ತರ ಅಥವಾ **ಶರಣಸಿದ್ಧಿಯ ಶಿಖರ** ಎನ್ನಲಾಗುತ್ತದೆ.

ಶರಣನಾದವನು ದೇಹವನ್ನು ಧರಿಸಿದ್ದರೂ **ನಿರ್ದೇಹಿ;** ನಡೆಯುತ್ತಿದ್ದರೂ **ನಿರ್ಗಮನಿ.** ನುಡಿಯುತ್ತಿದ್ದರೂ **ನಿಶ್ಶಬ್ದಿ;** ವ್ಯಕ್ತಿಯಾಗಿದ್ದರೂ ಜಗತ್ತನ್ನೇ ಆವರಿಸಿರುತ್ತಾನೆ. ಆತ ನಡೆದುದೆಲ್ಲ ಪೂಜೆ, ನುಡಿದುದೆಲ್ಲಾ ಮಂತ್ರ. ಅವನಿಗೆ ಕಾಯಕವೇ ಕೈಲಾಸವಾಗಿ ಪರಿಣಮಿಸಿರುತ್ತದೆ. ಇಲ್ಲಿ **'ಶರಣ'** ಎಂದರೆ ಶಿವನಿಗೆ ತಲೆಬಾಗಿದವನು ಎಂಬ ಸಾಮಾನ್ಯ ಅರ್ಥವನ್ನೂ ಮಾಡಬಹುದು.

ಶರಣರ ವೈಶಿಷ್ಟ್ಯತೆಯನ್ನು ಅಮುಗಿ ದೇವಯ್ಯ ಹೀಗೆ ಸ್ಪಷ್ಟಪಡಿಸಿದ್ದಾನೆ:

**ಉಷ್ಣತೆಯ ಒರತೆಯಂತೆ, ಉರಿಯ ನೆಳಲಂತೆ**
**ಮಂಜಿನ ಮಳೆಯಂತೆ, ಬಿಸಿಲ ಕುದುರೆಯಂತೆ**
**ಬೆಟ್ಟದ ಶಬ್ದದಂತೆ ಸುಳಿವ, ಸಿದ್ಧ**
**ಸೋಮನಾಥ ಲಿಂಗ ನಿಮ್ಮ ಶರಣ**

ಈ ವಚನ ಮೇಲ್ನೋಟಕ್ಕೆ ಸಾಮಾನ್ಯವಾಗಿ ಕಂಡರೂ ಅಂತರಂಗದಲ್ಲಿ ವಿಶೇಷಾರ್ಥವನ್ನು ಹುದುಗಿಸಿಕೊಂಡಿದೆ.

### ಐಕ್ಯಸ್ಥಲ

ಈ ಲೋಕದಲ್ಲಿ ತನಗೆ ಬಂದ ಕರ್ತವ್ಯವನ್ನು ನಿಸ್ವಾರ್ಥವಾಗಿ ನಿರ್ವಹಿಸಿದ ಶರಣನು ಸಾಮರಸ್ಯದಲ್ಲಿ ಲೀನವಾಗುವುದನ್ನು ಐಕ್ಯಸ್ಥಲದಲ್ಲಿ ಕಾಣುತ್ತೇವೆ. ತನು ಮನ ಪ್ರಾಣ ಭಾವಗಳು ನಿವೃತ್ತಿಯಾಗಿ ಲಿಂಗಸ್ವರೂಪವಾಗುತ್ತವೆ; ಹೀಗೆ ನಿವೃತ್ತಿಯಾದಂತೆಲ್ಲ ಗುರು ಲಿಂಗ ಜಂಗಮಗಳೂ ಒಂದಾಗಿ ಅವನಲ್ಲಿ ಐಕ್ಯವಾಗುತ್ತವೆ. **"ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ, ಆವ ಸಂಗವೂ ಇಲ್ಲ ನಿಜೈಕ್ಯನು". "ಘೃತ ಘೃತವ ಬೆರಸಿದಂತೆ, ಕ್ಷೀರ ಕ್ಷೀರವ ಬೆರಸಿದಂತೆ, ತೈಲ ತೈಲ ಬೆರಸಿದಂತೆ, ಜ್ಯೋತಿ ಜ್ಯೋತಿ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ"** ಅಂಗಲಿಂಗಗಳಲ್ಲಿ ಎರಡೆಂಬ ಭಾವವಳಿದು ಏಕೋಭಾವವು ಮೂಡುತ್ತದೆ. ಇಲ್ಲಿ ಐಕ್ಯಸ್ಥಲದ ನಿಲುವನ್ನು ನಿಚ್ಚಳವಾಗಿ ನಿರೂಪಿಸಲಾಗಿದೆ. ಸತ್ಯಕ್ಕ ಎಂಬ ಶರಣೆ ಹೀಗೆ ಹೇಳುತ್ತಾಳೆ:

**ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು**
**ವಾಯು ನುಂಗಿದ ಪರಿಮಳದಂತೆ ಲಿಂಗೈಕ್ಯವು**
**ಉರಿಯೊಳಡಗಿದ ಕರ್ಪೂರದಂತೆ ಲಿಂಗೈಕ್ಯವು**
**ಭಾವವನರಿಪಿದ ಬಯಲಿನಂತೆ ಲಿಂಗೈಕ್ಯವು**
**ಅರಿವು ನುಂಗಿದ ಮರಹಿನಂತೆ ಲಿಂಗೈಕ್ಯವು**

ಒಟ್ಟಾರೆ ಸುಜ್ಞಾನ ಸದ್ಭಕ್ತಿಗಳ ಹಾದಿಯಲ್ಲಿ ನಡೆಯುತ್ತ, ಒಲಿದು ಬೆಳೆಯುತ್ತ, ಅರಳಿ ಹೂವಾಗುತ್ತ, ಪರಿಪಕ್ವ ಮನಸ್ಸಿನ ಲಿಂಗಾಂಗ ಸಾಮರಸ್ಯ ಹೊಂದಿ ವಿಕಸನಗೊಳ್ಳುವುದೇ **ಷಟ್‌ಸ್ಥಲ**. ವಿಶ್ವಾಸವೇ ಪ್ರಾಣವಾಗಿರುವವನು **ಭಕ್ತ**; **ವಿಶ್ವದೊಳಗಣ ನಿಷ್ಠೆಯಲ್ಲಿರುವುದೇ ಮಾಹೇಶ್ವರ; ನಿಷ್ಠೆಯೊಳಗೆ ನಿರಂತರ ಸಾವಧಾನದಿಂದ ಅರ್ಪಿತ ಗೊಳ್ಳುವುದೇ ಪ್ರಸಾದಿ; ಸಾವಧಾನದೊಳಗೆ ಸ್ವಾನುಭಾವದ ವಿವೇಕ ಅಳವಡಿಸಿಕೊಳ್ಳುವುದೇ ಪ್ರಾಣಲಿಂಗಿ; ಆ ವಿವೇಕದೊಳಗೂ ಅರಿವಿನ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವನೆಯ ಮೂಲಕ ಐಕ್ಯವಾಗುವುದೇ ಐಕ್ಯಸ್ಥಲ.** *(ಮುಂದುವರಿಯುವುದು)*